ಕಣ್ತುಂಬಿಸಿಕೊಂಡು ಬರುತ್ತಿದ್ದ. ತನ್ನ ಕೆಲವು ಗುಣಗಳು ಮೊಮ್ಮಗನಲ್ಲೂ ಸುಮಾರಾಗಿಯೇ ಮೊಳಕೆಯೊಡೆದಿರುವುದು ಮಫತ್ಲಾಲ್ ಗುನ್ನಾಲಾಲನಿಗೆ ಖುಷಿಯೆನಿಸಿ ಮೊಮ್ಮಗ ಹಾಯಾಗಿ ಮಲಗಿರುವುದನ್ನು ಕಂಡವನಿಗೆ ಥಟ್ಟನೆ ಮನದಲ್ಲಿ ಇನ್ನೊಂದು ಚಿಂತೆ ಹುಟ್ಟಿಕೊಂಡಿತ್ತು. ಹಿಂತಿರುಗಿ ತನ್ನ ಹಾಸಿಗೆಯ ಮೇಲುರುಳಿದ ಗುನ್ನಾಲಾಲನ ಮೈಮನದ ತುಂಬಾ ಆ ಚಿಂತೆ ಹೆಬ್ಬಾವಿನಂತೆ ಸುತ್ತಿಕೊಂಡಿತ್ತು.

ಪ್ರಿಯ ಓದುಗರೆ,

ಮಫತ್ಲಾಲ್ ಗುನ್ನಾಲಾಲನ ಚಿಂತೆ ಏನಿರಬಹುದೆಂಬ ವಿಷಯಕ್ಕಿಂತಲೂ ಇಷ್ಟೊತ್ತಿಗಾಗಲೇ ನಿಮ್ಮಲ್ಲೊಂದು ಗುಮಾನಿ ಹುಟ್ಟಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಅದೆಂದರೆ ಮಫತ್ಲಾಲ್ ಗುನ್ನಾಲಾಲನ ಮೊಮ್ಮಗನ ಹೆಸರು! ಪಕ್ಕಾ ಮಾರ್ವಾಡಿ ಗುನ್ನಾಲಾಲ್ ಮೊಮ್ಮಗನಿಗೆ ಆಸ್ಕರ್ ವೈಲ್ಡ್ ಎಂಬ ಆಂಗ್ಲ ಹೆಸರನ್ನು ಏಕೆ ಇಟ್ಟಿರುವನೆಂಬುದು. ಅವನ ಹೆಸರಿಗೂ ಮತ್ತು ಅವನಿಗೆ ಐದು ವರ್ಷಗಳ ಹಿಂದೆ ಬಿದ್ದ ಕನಸಿಗೂ ಒಂದು ಅವಿನಾಭಾವ ಸಂಬಂಧ ಇರುವುದರ ಬಗ್ಗೆ ಹೇಳಲೆಂದು ನಾನಿಲ್ಲಿ ಮಧ್ಯ ಪ್ರವೇಶಿಸಿದ್ದು. ಮತ್ತು ನಿಮ್ಮೊಂದಿಗೆ ಕೊನೆಯವರೆಗೂ ಇದ್ದು ಈ ಕಥಾನಕದ ಅಂತ್ಯದವರೆಗೂ ಯಾವುದೇ ಗೊಂದಲಗಳಿಲ್ಲದೆ ಆಸ್ಕರ್ ವೈಲ್ಡನ ವೃತ್ತಾಂತವನ್ನು ನಿಮ್ಮ ಮುಂದೆ ಹರಡುತ್ತಾ ಹೋಗುತ್ತೇನೆ. ಆಸ್ಕರ್ ವೈಲ್ಡನ ಹುಟ್ಟು ಹೆಸರು ಅಥವಾ ಮೂಲ ಹೆಸರು ಸೋನಾಲಾಲ್. ಮನೆಯಲ್ಲೇ ಅಲ್ಲದೆ ಸ್ಕೂಲ್ ಮತ್ತು ಪರಿಚಯದ ಪ್ರತಿಯೊಬ್ಬರೂ ಅವನನ್ನು 'ಸೋನಾ' ಎಂತಲೇ ಕರೆಯುತ್ತಿದ್ದದ್ದು. ಮಫತ್ಲಾಲ್ ಗುನ್ನಾಲಾಲ್ ಮೊಮ್ಮಗನಿಗೆ ಸೋನಾಲಾಲ್ ಎಂದು ಹೆಸರಿಡುವುದಕ್ಕೂ ಒಂದು ಬಲವಾದ ಕಾರಣವಿದೆ.

ಹೆರಿಗೆ ನೋವು ಬಂದು ಮಗ ಭವರ್ ಲಾಲ್ ಸೊಸೆ ಊರ್ಮಿಳಾ ದೇವಿಯನ್ನು ಡೆಲಿವರಿಗೆಂದು ನರ್ಸಿಂಗ್ ಹೋಂಗೆ ಸೇರಿಸಿದ್ದ. ತಪಾಸಣೆ ಮಾಡಿದ ಡಾಕ್ಟರ್ ಡೆಲಿವರಿ ಆಗಲು ಇನ್ನೂ ಎರಡು ದಿನ ಬೇಕಾಗಿರುವುದಾಗಿ ನರ್ಸಿಂಗ್ ಹೋಂನಲ್ಲಿಯೇ ಇರಿಸಿಕೊಂಡಿದ್ದರು. ಅಂದು ಸಂಜೆ ಮಫತ್ಲಾಲ್ ಗುನ್ನಾಲಾಲನ ರೆಡಿಮೇಡ್ ಫ್ಯಾಕ್ಟರಿಗೆ ಬಂದ ಒಂದು ಲಾರಿ ಫ್ಯಾಬ್ರಿಕ್ ಬಂಡಲ್‌ಗಳಲ್ಲಿ ಇನ್ನೂರು ಕೇಜಿ ಸ್ಮಗಲ್ಡ್ ಬಂಗಾರದ ಗಟ್ಟಿ ಸಿಕ್ಕಿತ್ತು. ಅದಾದ ಒಂದೇ ಗಂಟೆಯಲ್ಲಿ ಸೊಸೆಗೆ ನಾರ್ಮಲ್ ಹೆರಿಗೆಯಾಗಿ ಗಂಡು ಮಗುವಿಗೆ ಜನ್ಮವಿತ್ತಿದ್ದಳು! ನರ್ಸಿಂಗ್ ಹೋಂಗೆ ಹೋದ ಮಫತ್ಲಾಲ್ ಗುನ್ನಾಲಾಲ್ ಮೊಮ್ಮಗನ ಮುಖವನ್ನು ಮೃದುವಾಗಿ ಸವರಿ, ಯಾರನ್ನೂ ಹೇಳದೇ ಕೇಳದೇ ಸೋನಾ, ಸೋನಾಲಾಲ್ ಎಂದು ಕರೆದುಬಿಟ್ಟ. ನೋಡಲು ಕೂಡಾ ಮಗು ಬಂಗಾರದಂತೆ ಕಂಗೊಳಿಸುತ್ತಿತ್ತು. ಕಡೆಗೆ ಯಾರಿಗೂ ಹೇಳದಂತೆ ಮುಂಬೈನ ನಂಬರ್ ಒನ್ ಅಸ್ಟ್ರಾಲಜರ್ ರಾಮ್ ಗೋಪಾಲ್ ತೆಕ್ವಾನಿಯನ್ನು ಭೇಟಿಯಾಗಿ ಮೊಮ್ಮಗನ ಭವಿಷ್ಯದ ಬಗ್ಗೆ ಕೇಳಿದ್ದ. ಐವತ್ತು ಸಾವಿರದ ಒಂದು ರೂಪಾಯಿಯನ್ನು ತನ್ನ ಜುಬ್ಬಾದ ಜೇಬಿಗೆ ಇಳಿಬಿಟ್ಟುಕೊಂಡ ತೆಕ್ವಾನಿ 'ಅಯ್ಯಾ ಗುನ್ನಾಲಾಲ್, ನಿನ್ನ ಮೊಮ್ಮಗನ ಭವಿಷ್ಯ ಕೂಡಾ ಅದೃಷ್ಟದ ಮುತ್ತುರತ್ನಗಳಿಂದ ಕೂಡಿದೆ. ಹತ್ತು ಲಕ್ಷ ಜನರಲ್ಲೊಬ್ಬರಲ್ಲೂ ಇಂಥ ಅದೃಷ್ಟದ ರೇಖೆಗಳನ್ನು ನೋಡಲಾಗುವುದಿಲ್ಲ. ನಿನ್ನದೇ ನಕ್ಷತ್ರ ನಿನ್ನ ಮೊಮ್ಮಗನದು ಕೂಡ. ಅವನ ಭವಿಷ್ಯದ ಬಗ್ಗೆ ಮತ್ತೊಮ್ಮೆ ಬೇರೆ ಯಾವ ಜ್ಯೋತಿಷಿಯ ಹತ್ತಿರವೂ ಕೇಳಬೇಡ...' ಎಂದು ಹೇಳಿ ಕಳಿಸಿದ್ದ. ಸೊಸೆ ಮತ್ತು ಮೊಮ್ಮಗನನ್ನು ಮೂರು ದಿನಗಳ ನಂತರ ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದಿದ್ದರು. ಗುನ್ನಾಲಾಲ್ ತನ್ನ ಫ್ಯಾಕ್ಟರಿ ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಒಂದೊಂದು ಕೇಜಿ ಸ್ವೀಟ್ಸ್ ಮತ್ತು ತಲಾ ಐನೂರು ರೂಪಾಯಿ ಹಣವನ್ನು ಹಂಚಿಸಿದ್ದ. ಅಂದು ರಾತ್ರಿ ಎಂಟು ಗಂಟೆಯಲ್ಲಿ ಕಂಪನಿಯ ತನ್ನ ಚೇಂಬರಿನಿಂದ ಹೊರಡಲು ಸಿದ್ಧವಾಗುತ್ತಿರುವಾಗ ಫೋನ್ ಮೊಳಗಿತ್ತು. ರಿಸೀವರ್ ಎತ್ತಿಕೊಂಡು 'ಹಲೋ' ಎಂದಿದ್ದ.

'ಏನು ಗುನ್ನಾಲಾಲ್ ಬಹಳ ಆನಂದ ತುಂಬಿಕೊಂಡಿದೆ ಧ್ವನಿಯಲ್ಲಿ. ಮೊಮ್ಮಗನಿಗೆ ಸೋನಾ ಅಂತ ಹೆಸರಿಟ್ಟಿರುವೆಯಂತೆ', ಹಿಂದೆಂದೂ ಆ ಧ್ವನಿಯನ್ನು ಕೇಳಿದ ನೆನಪಾಗಲಿಲ್ಲ ಗುನ್ನಾಲಾಲನಿಗೆ. ಏನೋ ಅನುಮಾನ ತಲೆ ಹೊಕ್ಕಿತ್ತು.

'ಯಾರು ನೀವು?' ಎಂದು ಪ್ರಶ್ನಿಸಿದ್ದ. ಗುನ್ನಾಲಾಲ್ ಶ್ರೀಮಂತಿಕೆ ಬಂದ ನಂತರವೂ ಎಂದೂ ಯಾರೊಂದಿಗೂ ದುರಹಂಕಾರದಿಂದ ಮಾತನಾಡಿದವನಲ್ಲ. ಒಬ್ಬ ಯಶಸ್ವಿ ವ್ಯಾಪಾರಿ ಯಾವತ್ತೂ ಕೋಪಿಸಿಕೊಳ್ಳುವುದಿಲ್ಲ ಮತ್ತು ಸಂಯಮ ಕಳೆದುಕೊಳ್ಳುವುದಿಲ್ಲ ಎಂಬುದಕ್ಕೆ ಗುನ್ನಾಲಾಲ್ ತುಂಬಾ ಒಳ್ಳೆಯ ಉದಾಹರಣೆಯಾಗಿದ್ದ.

'ನಾನು ರಾಜೂ ಶಿಂಥೆ, ಮಸ್ತಾನ್ ಭಯ್ಯಾ ಮಾತನಾಡಬೇಕಂತೆ' ಎಂದಿತ್ತು ಆ ಕಡೆಯ ಧ್ವನಿ. ಗುನ್ನಾಲಾಲನ ಅನುಮಾನ ನಿಜವಾಗಿತ್ತು. ಭೂಗತ ದೊರೆ ಮತ್ತು ಸ್ಮಗ್ಲರ್ ಹಾಜಿ ಮಸ್ತಾನ! ಗುನ್ನಾಲಾಲನಿಗೇನೂ ಭಯವಾಗಲಿಲ್ಲ. 'ಹಾಗೇ ಆಗಲಿ ಭಯ್ಯಾ' ಎಂದಿದ್ದ ನಯವಾಗಿಯೇ.

'ಹಲೋ ಗುನ್ನಾಲಾಲ್ ಜೀ, ಸೋನಾ ನಮ್ಮದು. ಮಿಸ್ಸಾಗಿ ಟ್ರಕ್ಕಿನಲ್ಲಿ ಬಟ್ಟೆಗಳೊಂದಿಗೆ ನಿಮ್ಮ ಫ್ಯಾಕ್ಟರಿಯಲ್ಲಿ ಬಂದು ಇಳಿದಿದೆ. ಸೋನಾ ನೀವೇ ಇಟ್ಟುಕೊಳ್ಳಿ, ನಮಗೆ ಕ್ಯಾಶ್ ತಲುಪಿದರೆ ಸಾಕು. ರೇಟು ಒಂದಿಷ್ಟು ಆ ಕಡೆ ಈ ಕಡೆ ಆದರೂ ಪರವಾಗಿಲ್ಲ. ನಾಳೆ ನಮ್ಮ ರಾಜೂ ಶಿಂಥೆ ಬರ್ತಾನೆ' ಅಷ್ಟೇ, ಫೋನ್ ಕಟ್ಟಾಗಿತ್ತು. ಮುಂಬಯಿಯ



## ಕೇಶವರೆಡ್ಡಿ ಹಂದ್ರಾಳ

ಮಧುಗಿರಿ ತಾಲ್ಲೂಕಿನ ಹಂದ್ರಾಳ ಕನ್ನಡದ ಪ್ರಸಿದ್ಧ ಬರಹಗಾರರಲ್ಲೊಬ್ಬರು, 'ಸುಧಾ' ಓದುಗರಿಗೆ ಚಿರಪರಿಚಿತರು. ಊರುಕೇರಿಗಳಿಂದ ಮಹಾನಗರಗಳ ಮಹಲು ಹಾಗೂ ಇಡುಕಿರಿದ ಓಣಿಗಳವರೆಗಿನ ಜೀವಜಗತ್ತು ಹಂದ್ರಾಳರ ಒಟ್ಟು ಬರವಣಿಗೆಯ ಕೇಂದ್ರದಲ್ಲಿದೆ. 'ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ' ಎನ್ನುವ ಮಾತು ಅವರ ಬರವಣಿಗೆಯ ಮನೋಧರ್ಮಕ್ಕೆ ಅನ್ವಯಿಸುವಂತಹದ್ದು. ಕನ್ನಡ ಗದ್ಯದ ಚೆಲುವನ್ನು ಹೆಚ್ಚಿಸಿದವರಲ್ಲೊಬ್ಬರಾದ ಹಂದ್ರಾಳರು ಬರಹಗಾರರಾಗಿ ಮಾತ್ರವಲ್ಲದೆ, ಸಂಘಟನೆ ಹಾಗೂ ಚಳವಳಿಗಳಲ್ಲೂ ಗುರ್ತಿಸಿಕೊಂಡಿದ್ದರು. ಅವರ ಅನುಭವಜಗತ್ತಿನ ಅಭಿವ್ಯಕ್ತಿಯ ರೂಪದಲ್ಲಿ ನೂರಾರು ಕಥೆಗಳು, ಕಾದಂಬರಿಗಳು ಹಾಗೂ ಇನ್ನಿತರೆ ಗದ್ಯಬರಹವನ್ನು ಗಮನಿಸಬಹುದು. ಹಿಂದಿ ಹಾಗೂ ತೆಲುಗಿಗೂ ಹಂದ್ರಾಳರ ಕೆಲವು ಕೃತಿಗಳು ಅನುವಾದಗೊಂಡಿವೆ; ಸಿನಿಮಾ ಆಗಿ ರೂಪಾಂತರಗೊಂಡಿವೆ. 'ನನ್ನ ಕ್ರಾಂತಿಯ ಹುಡುಗಿ', 'ಅಂತಃಪುರ', 'ಬರದ ನಾಡಲ್ಲಿ ಬೆಳದಿಂಗಳು', 'ಮೋಡ ಕರಗುವ ಮುನ್ನ', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಒಕ್ಕಲ ಒನಪು', 'ರಾಜಧಾನಿಯ ರಸ್ತೆಗಳಲ್ಲಿ', 'ಹಾಲು ಕುಡಿಯದಿರು ಕಂದ', 'ಅಲ್ಲಮನ ಆತ್ಮಲಿಂಗ', 'ಈ ಕ್ಷಣದ ಬುದ್ಧ', 'ಮೃಗಜಲ', 'ಅಣು', 'ಲಂಟಾನಾ', 'ಸೋನಾಗಾಚಿ', 'ಮೃಗತೃಷ್ಣ' ಹಾಗೂ 'ಮಹಾಪ್ರಸ್ಥಾನ' ಹಂದ್ರಾಳರ ಕೆಲವು ಕೃತಿಗಳು.